# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ. ತಳವಾರ್ ಸಾಬಣ್ಣಾ ಇವರು ನಿಯಮ-72ರ ಮೇರೆಗೆ ನೀಡಿರುವ ಸೂಚನೆಗೆ ಉನ್ನತ ಶಿಕ್ಷಣ ಸಚಿವರ ಉತ್ತರ

**ವಿಷಯ:-**

ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ KEA ಮೂಲಕ ಪ್ರವೇಶ ಪ್ರಕ್ರಿಯೆಯಲ್ಲಿ ಸೀಟ್ ಬ್ಲಾಕಿಂಗ್ ದಂಧೆಯಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸೀಟು ಸಿಗದೆ ಅನ್ಯಾಯವಾಗುತ್ತಿದೆ. ಹೆಚ್ಚಿನ ಬೇಡಿಕೆ ಇರುವ ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಕೋರ್ಸುಗಳಿಗೆ ಆಯ್ಕೆಯಾಗಿ ಪ್ರವೇಶ ಪಡೆಯದ ವಿದ್ಯಾರ್ಥಿಗಳು ಮತ್ತು ಶಿಕ್ಷಣ ಸಂಸ್ಥೆಗಳು ಸೀಟ್ ಬ್ಲಾಕಿಂಗ್ ಜಾಲದಲ್ಲಿ ತೊಡಗಿಸಿಕೊಂಡು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಂಚಿಸುತ್ತಿದ್ದಾರೆ. KEA ಮೂಲಕ ಸೀಟು ಪಡೆದ ಅಭ್ಯರ್ಥಿಗಳು ಕಾಲೇಜಿಗೆ ಪ್ರವೇಶ ಪಡೆಯದಿರುವುದು. ಈ ರೀತಿ ಉಳಿಕೆಯಾಗಿರುವ ಸೀಟುಗಳನ್ನು ಅಂತಿಮವಾಗಿ ಮ್ಯಾನೇಜ್ಮೆಂಟ್ ಕೋಟಾಗೆ ಹಿಂತಿರುಗಿಸುವುದರಿಂದ ಸೀಟನ್ನು ಹೆಚ್ಚಿನ ಹಣಕ್ಕೆ ಮಾರಿಕೊಳ್ಳಲು ಕಾಲೇಜುಗಳಿಗೆ ಅಭ್ಯರ್ಥಿಗಳು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ಸೀಟ್ ಬ್ಲಾಕಿಂಗ್ ಜಾಲದಲ್ಲಿ ಉನ್ನತ ಶಿಕ್ಷಣ ಅಧಿಕಾರಿಗಳು / ಕೆಇಎ ಸಿಬ್ಬಂದಿಗಳು ಭಾಗಿಯಾಗಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗಿದೆ. ಇದರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಬಗ್ಗೆ ಅಭ್ಯರ್ಥಿಗಳು ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಸೀಟ್ ಬ್ಲಾಕಿಂಗ್ ಜಾಲದ ಬಗ್ಗೆ ಉನ್ನತ ಮಟ್ಟದ ಸಮಗ್ರ ತನಿಖೆ ನಡೆಸುವ ಕುರಿತು ಉನ್ನತ ಶಿಕ್ಷಣ ಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:-**

2024-25ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆ ಮಾಡಲಾಗಿದೆ. ಈ ಸೀಟುಗಳನ್ನು 2024 ರಲ್ಲಿ ಸಿಇಟಿ ಬರೆದ ವಿದ್ಯಾರ್ಥಿಗಳಿಗೆ, ಅವರು Option Entry ಮೂಲಕ ಆಯ್ಕೆ ಮಾಡಿದಂತೆ, ಒಂದನೇ ಸುತ್ತು, ಎರಡನೇ ಸುತ್ತು ಹಾಗೂ ಎರಡನೇ ಮುಂದುವರಿದ ಸುತ್ತಿನಲ್ಲಿ ಹಂಚಿಕೆ ಮಾಡಲಾಗಿದೆ.

ಎರಡನೇ ಮತ್ತು ಎರಡನೇ ಮುಂದುವರಿದ ಸುತ್ತಿನಲ್ಲಿ ವಿದ್ಯಾರ್ಥಿಗಳು Option Entry ಮಾಡುವಾಗ, ಪ್ರಾಧಿಕಾರದ ಎಲ್ಲಾ ಪ್ರಕಟಣೆಗಳಲ್ಲಿ ಪೋಷಕರೊಂದಿಗೆ ಚರ್ಚಿಸಿ ಸರಿಯಾಗಿ ಕಾಲೇಜು ಆಯ್ಕೆ ಮಾಡಿ Option Entry ಮಾಡುವುದು ಹಾಗೂ ಸೀಟು ಹಂಚಿಕೆಯಾದ ನಂತರ ಕಡ್ಡಾಯವಾಗಿ ಆಯ್ಕೆ ಮಾಡಿರುವ ಕಾಲೇಜಿಗೆ ಸೇರಬೇಕೆಂದು ತಿಳಿಸಲಾಗಿದೆ. ಆದರೂ, ಎರಡನೇ ಮುಂದುವರಿದ ಸುತ್ತಿನಲ್ಲಿ ಸೀಟು ಪಡೆದ ಒಟ್ಟು 2625 ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆದಿರುವುದಿಲ್ಲ.

ಎರಡನೇ ಮುಂದುವರಿದ ಸುತ್ತಿನಲ್ಲಿ ಸೀಟು ಪಡೆದ ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೀಡಿದ ದಿನಾಂಕದೊಳಗೆ ಕಾಲೇಜಿಗೆ ಸೇರದಿದ್ದರೆ, ಅಂತಹ ಉಳಿದ ಸೀಟುಗಳ ಕುರಿತು ಸಮ್ಮತಾಭಿಪ್ರಾಯ ಒಪ್ಪಂದದಲ್ಲಿ (Consensual Agreement) ಈ ಕೆಳಗಿನಂತೆ ನಿರ್ದಿಷ್ಟಪಡಿಸಲಾಗಿದೆ.

*F) "Without any reason to professional Institutions should admit all the candidates who are allotted by Karnataka Examinations Authority. After casual round of counselling (after 2nd extended round) the KEA shall provide branch wise vacancy list of available and shall hand over to the concerned college. During reconciliation and approval the colleges should provide the list of vacant seats issued by the KEA if available"*

ಮೇಲಿನ ಒಪ್ಪಂದದಂತೆ, ಉಳಿಕೆಯಾಗುವ ಸರ್ಕಾರಿ ಕೋಟಾದ ಸೀಟುಗಳು ಸಂಬಂಧಿತ ಕಾಲೇಜುಗಳಿಗೆ ವರ್ಗಾವಣೆಯಾಗುವುದರಿಂದ, ಕೆಲವು ಕಾಲೇಜುಗಳ ಆಡಳಿತ ಮಂಡಳಿಗಳು ಈ ಸೀಟುಗಳನ್ನು ಕಡಿಮೆ Rank ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಶುಲ್ಕಕ್ಕೆ ನೀಡುತ್ತಿರುವುದು ಕಂಡುಬಂದಿದೆ.

ಎರಡನೇ ಮುಂದುವರಿದ ಸುತ್ತಿನಲ್ಲಿ ಸೀಟು ಪಡೆದು ಕಾಲೇಜಿಗೆ ಸೇರ್ಪಡೆಯಾಗದ 2625 ವಿದ್ಯಾರ್ಥಿಗಳಿಗೆ ನೋಟೀಸು ನೀಡಲಾಗಿದ್ದು, ಈ ಪೈಕಿ ಅಂದಾಜು 920 ವಿದ್ಯಾರ್ಥಿಗಳು ಲಿಖಿತ ಉತ್ತರಗಳನ್ನು ಸಲ್ಲಿಸಿರುತ್ತಾರೆ. ಈ ಉತ್ತರಗಳನ್ನು ಪರಿಶೀಲನೆಗೆ ಒಳಪಡಿಸಿದ ನಂತರ ಹೆಚ್ಚು ಬೇಡಿಕೆ ಇಲ್ಲದ ಕಾಲೇಜುಗಳು ಮತ್ತು ಕೋರ್ಸ್‌ಗಳಿಗೆ ಸೀಟು ಪಡೆದು ಸೇರದಿರಲು ನೀಡಿದ ಕಾರಣಗಳನ್ನು ಪರಿಗಣಿಸಿ, ನಿಯಮಾನುಸಾರ ದಂಡ ವಿಧಿಸಲಾಗುವುದು. ಆದರೆ, ಹೆಚ್ಚು ಬೇಡಿಕೆ ಇರುವ ಕಾಲೇಜುಗಳು ಮತ್ತು ಕೋರ್ಸ್‌ಗಳಿಗೆ ಸೀಟು ಪಡೆದು ಪ್ರವೇಶ ಪಡೆಯದ 56 ವಿದ್ಯಾರ್ಥಿಗಳಿಂದ ಪಡೆದ ಸಮಜಾಯಿಷಿಯನ್ನು ಪರಿಶೀಲಿಸಿದ್ದು, ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ.

- ಕೆಲವು ವಿದ್ಯಾರ್ಥಿಗಳು KCET-2024 ಮತ್ತು JEE-2024 ಪರೀಕ್ಷೆಗಳನ್ನು ಬರೆದಿದ್ದು, JEE-2024 ಮೂಲಕ ಉತ್ತಮ ಕಾಲೇಜು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆದಿರುತ್ತಾರೆ. ಸದರಿಯವರು KEA ಯಿಂದ ಸೀಟು ಪಡೆಯಲು Option Entry ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.
- ಕೆಲವು ವಿದ್ಯಾರ್ಥಿಗಳು KCET-2024 ಮತ್ತು NEET-2024 ಪರೀಕ್ಷೆಗಳನ್ನು ಬರೆದಿದ್ದು, AIQ (All India Quota) ಅಡಿಯಲ್ಲಿ ಮೆಡಿಕಲ್ ಸೀಟು ಹಂಚಿಕೆಯಾಗಿರುವ ಕಾರಣ ಅಲ್ಲಿ ಪ್ರವೇಶ ಪಡೆದಿರುತ್ತಾರೆ. ಸದರಿ ವಿದ್ಯಾರ್ಥಿಗಳು ಸಹ KEA ಯಿಂದ ಸೀಟು ಪಡೆಯಲು Option Entry ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.
- ಕೆಲವು ವಿದ್ಯಾರ್ಥಿಗಳು ಬೇರೆ ರಾಜ್ಯಗಳಲ್ಲಿ ಇತರ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವುದರಿಂದ KEA ಯಿಂದ ಸೀಟು ಪಡೆಯಲು Option Entry ಮಾಡಿರುವುದಿಲ್ಲವೆಂದು ವಿವರಣೆ ನೀಡಿರುತ್ತಾರೆ.

KCET-2024 ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಮಾತ್ರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ Login, Password ಮತ್ತು Secret Key ಒದಗಿಸಲಾಗಿದ್ದು, ಇವುಗಳನ್ನು ಬಳಕೆ ಮಾಡದೆ Option Entry ಮೂಲಕ ಸೀಟು ಪಡೆಯುವುದು ಸಾಧ್ಯವಿಲ್ಲ. ಇದಕ್ಕೆ ಪೂರಕವಾಗಿ, ಕೆಲವೇ IP address ನಿಂದ Option Entry ಮಾಡಿರುವುದು ಕಂಡುಬಂದಿದ್ದು, ಕೆಲವು

ಮಧ್ಯವರ್ತಿಗಳು ಉತ್ತಮ Rank ಹೊಂದಿರುವ ವಿದ್ಯಾರ್ಥಿಗಳ Login, Password ಮತ್ತು Secret Key ಪಡೆದು ಅಥವಾ ಕದ್ದು Option Entry ಮಾಡಿರುವ ಘಟನೆಗಳು ನಡೆದಿರುವುದು ಗಮನಕ್ಕೆ ಬಂದಿರುತ್ತದೆ. ಈ ಮೂಲಕ ಕೊನೆಯ ಸುತ್ತಿನಲ್ಲಿ ಹೆಚ್ಚು ಬೇಡಿಕೆ ಇರುವ ಕಾಲೇಜುಗಳಲ್ಲಿ ಬೇಡಿಕೆಯ ಕೋರ್ಸುಗಳನ್ನು ಆಯ್ಕೆ ಮಾಡಿಸಿ, Consensual Agreement ಪ್ರಕಾರ ಈ ಸೀಟುಗಳು ಅಂತಹ ಕಾಲೇಜುಗಳಿಗೆ ಹೋಗುವಂತೆ ಮಾಡಿ, ಕಾಲೇಜಿಗೆ ಲಾಭ ಮಾಡಿಕೊಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ ವ್ಯಕ್ತಿಗಳನ್ನು ಗುರುತಿಸಿ, ಕಾನೂನು ರೀತಿಯ ಸೂಕ್ತ ಕ್ರಮ ಜರುಗಿಸಬೇಕೆಂದು ದಿನಾಂಕ:13.11.2024 ರಂದು ಪ್ರಾಧಿಕಾರದ ವತಿಯಿಂದ ಮಲ್ಲೇಶ್ವರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ (ಪ್ರಥಮ ವರ್ತಮಾನ ವರದಿ ಸಂಖ್ಯೆ:171/2024). ಈ ಪ್ರಕರಣದಲ್ಲಿ ಬಾಗಿಯಾಗಿರುವ 10 ಜನರನ್ನು ಈಗಾಗಲೇ ಬಂಧಿಸಿದ್ದು, ಸದರಿ ತನಿಖೆಯು ಪ್ರಸ್ತುತ ಪ್ರಗತಿಯಲ್ಲಿದೆ.

**ಸಂ: ಇಡಿ 495 ಟಿಇಸಿ 2024**

**(ಡಾ|| ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಇಲಾಖೆ